10. ಪ್ರಕಟಣೆ.

ಸಭಾಪತಿಯವರಿಂದ ಬಂದ ಸಂದೇಶ ದಂಡ ಪ್ರಕ್ರಿಯಾ ಸಂಹಿತೆ ಕರ್ನಾಟಕ (ತಿದ್ದುಪಡಿ) ವಿಧೇಯಕ 2005.

ಉಪಾಧ್ಯಕ್ಷರು : ಒಂದು ಪ್ರಕಟಣೆ ಇದೆ, ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ 2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ ಕರ್ನಾಟಕ (ತಿದ್ದುಪಡಿ) ವಿಧೇಯಕವನ್ನು ಈ ದಿನ 2ನೇ ಆಗಸ್ಟ್ 2005 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಯಿತೆಂದು ತಿಳಿಸಿರುತ್ತಾರೆ.

11. ಎತ್ತಿಯ ಕಾರ್ಯಕಲಾಪ.

2005-06ನೇಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ಮುಂದುವರೆದ ಚರ್ಚೆ.

ಶ್ರೀ ಜಿ ವಿ ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಆಸ್ಪತ್ರೆಗಳಿಗೆ ಔಷಧ ಖರೀದಿಗೆ ಹಣವಿಲ್ಲ ನಾನು ಯಾರ್ಯಾರರು ಎಷ್ಟೆಷ್ಟು ಶೇರ್ ಬಗ್ಗೆ ಮಾತನಾಡುತ್ತಿಲ್ಲ. ಮತ್ತೆ ಫ್ಯಾಕ್ಟರಿಯಲ್ಲಿ ಕಾರ್ಮಿಕರಿಗೆ ಆಕ್ಸಿಡೆಂಟ್ ಡೆತ್ಸ್ ಎಂದು ಇದೆ ಇವತ್ತಿನ ಪರಿಸ್ಥಿತಿಯಲ್ಲಿ ಅದಕ್ಕೆ ಈಗಿರುವ ಪರಿಹಾರ ಧನ ಎನೇನೂ ಸಾಕಾಗುವುದಿಲ್ಲ ಅದನ್ನು ದಯವಿಟ್ಟು ಹೆಚ್ಚು ಮಾಡಬೇಕು. ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ (ಐಟಿಐ) ಇನ್‌ಸ್ಟಿಟ್ಯೂಟ್‌ಗಳನ್ನು ಮಾಡಿದ್ದಾರೆ, ಸರ್ಕಾರದ್ದು, ಖಾಸಗಿಯವರು ಇದೆ. ನಿಜವಾಗಿಯೂ ಅದು ಜಾಬ್ ಓರಿಯಂಟೆಡ್‌ಗೆ ಭಾರಿ ಪ್ರಯೋಜನವಾಗುವ ಇನ್‌ಸ್ಟಿಟ್ಯೂಟ್‌ಗಳು. ಆದರೆ ಇವತ್ತು ಏನು ಮಾಡಿದ್ದೀರಿ, ಅದಕ್ಕೆ ಸ್ವಂತ ಬಿಲ್ಡಿಂಗ್ ಇಲ್ಲ, ಸ್ಟಾಫ್ ಸರಿಯಿಲ್ಲ ಸ್ಟಾಫ್ ಸರಿ ಇದ್ದರೆ ಬಿಲ್ಡಿಂಗ್ ಇಲ್ಲ ಇಂತಹ ಸ್ಥಿತಿಗೆ ತಂದಿಟ್ಟಿದ್ದೀರಿ. ಏನೂ ಇನ್‌ಫ್ರಾಸ್ಟ್ರಕ್ಚರ್ಸ್ ಕೊಡದೆ ಐಟಿಐಗಳನ್ನು ನೀವು ಏತಕ್ಕೆ ಪ್ರಾರಂಭ ಮಾಡುತ್ತೀರಿ. ಟೀಚಿಂಗ್, ನಾನ್ ಸ್ಟಾಫ್ ಕೊಡುವುದಿಲ್ಲ ಕಟ್ಟಡಕ್ಕೆ ಹಣ ಕೊಡುವುದಿಲ್ಲ, ಮತ್ತೆ ನೀವು ಏಕೆ ಐಟಿಐಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ? Most impotant –ITI; Job oriented course in education. ಅದೇ ರೀತಿಯಾಗಿ ಇವತ್ತು ನೀವು ಜೆಓಸಿಗಳನ್ನು ತಂದಿದ್ದೀರಿ, ಆ ಜೆಓಸಿ ಪಾಠ ಮಾಡುವ ಮೇಸ್ಟ್ರುಗಳಿಗೆ ವರ್ಷವಾದರೂ ಸಂಬಳ ಕೊಡುವುದಿಲ್ಲ, ಅವರನ್ನು ಮೇಸ್ಟ್ರುಗಳೆಂದು ಟ್ರೀಟ್ ಮಾಡಲು ತಯಾರಿಲ್ಲ, ಅವರ ಅಡ್ರೆಸ್ ಇಲ್ಲ, ಅವರ ಬಗ್ಗೆ ಕಾಳಜಿ ಇಲ್ಲ, ಆ ಜೆಓಸಿ ಕೋರ್ಸ್‌ಗಳನ್ನು ಈಗ ಪ್ರಾರಂಭ ಮಾಡಿಟ್ಟಿದ್ದೀರಿ, ಅದಕ್ಕೆ ಯಾವ ರೀತಿಯಾದ ಒಂದು ಧೋರಣೆ ಇಲ್ಲ, ಅವುಗಳನ್ನು ಮುಚ್ಚುವುದಾದರೆ ಮುಚ್ಚುಬಿಡಿ ಇಲ್ಲವೆಂದರೆ ವ್ಯವಸ್ಥಿತವಾಗಿ ನಡೆಸತಕ್ಕಂತಹ ವ್ಯವಸ್ಥೆಯನ್ನಾದರೂ ಮಾಡಿ. ಜಾಬ್ ಓರಿಯೆಂಟೆಡ್ ಕೋರ್ಸ್‌ಗಳೆಂದು ಮಾಡುವುದು ಐಟಿಐಗಳೆಂದು ಮಾಡುವುದು, ಅದಕ್ಕೆ ಯಾವುದೇ ರೀತಿಯಾದ ಮೂಲಭೂತ ಸೌಕರ್ಯಗಳಿಲ್ಲ; ಅವನ್ನು ನೀವು ಏತಕ್ಕೆ ಮಾಡುವುದಕ್ಕೆ ಹೊರಟ್ಟಿದ್ದೀರಿ? ಮಾನ್ಯ ಸಿದ್ಧರಾಮಯ್ಯನವರಲ್ಲಿ ನಾನು ಒಂದನ್ನು ಕೇಳುತ್ತೇನೆ, ಆ ಐಟಿಐಗಳೇನಿವೆ ಅವಕ್ಕೆ ಕಟ್ಟಡ

ಹಾಗೂ ಸಿಬ್ಬಂದಿಗಳಿಗೆ ಬೇಕಾದ ಹಣಕಾಸನ್ನು ನೀವು ಒದಗಿಸದೇ ಇದ್ದರೆ ದಯವಿಟ್ಟು ಅವನ್ನು ಮುಚ್ಚಿಬಿಡಿ, ಅವುಗಳು ಇರಬೇಕಾದಂಥ ಅವಶ್ಯಕತೆ ಇಲ್ಲ. ಆ ರೀತಿಯ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ; ಅದಕ್ಕೆ ಬೇಕಾದ ಹಣವನ್ನು ಬಜೆಟ್‌ನಲ್ಲೂ ತೆಗೆದು ಇಟ್ಟಿಲ್ಲ. ನಾನು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರನ್ನು ಕೇಳಿದೆ; ನಮ್ಮಲ್ಲೊಂದು ಐಟಿಐ ಇದೆ, ಪ್ರಾರಂಭವಾಗಿ 8 ವರ್ಷವಾಯಿತು, ಇವತ್ತಿಗೂ ಅದಕ್ಕೆ ಬಿಲ್ಡಿಂಗ್ ಇಲ್ಲ ಕೇಳಿದರೆ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ ನಾವೇನು ಮಾಡುವುದೆಂದು ಹೇಳುತ್ತಾರೆ; ಅವರು ಹೇಳುವುದು ಸತ್ಯವಿದೆ ಬಜೆಟ್‌ನಲ್ಲಿ ಹಣವಿಲ್ಲದಿದ್ದಾಗ ಏನು ಮಾಡುವುದಕ್ಕಗುತ್ತದೆ ಹಿಂದೆ ಕಟ್ಟಿರುವ ಕೆಲವು ಬಿಲ್ಡಿಂಗ್‌ಗಳಿಗೆ ಬಿಲ್ಲು ಕೊಟ್ಟಿಲ್ಲವಂತೆ; ಹಾಗಾಗಿ ಪರಿಸ್ಥಿತಿ ಬಹಳ ಕೆಟ್ಟದಾಗಿದೆ, ಅದನ್ನು ಸುಧಾರಿಸಬೇಕು.

ಇನ್ನು ಶಿಕ್ಷಣದ ಪರಿಸ್ಥಿತಿ ಇವತ್ತು ಗಂಭೀರವಾಗಿದೆ, ಅದೆಲ್ಲವನ್ನೂ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಈ ಸದನದಲ್ಲಿ ಸರ್ಕಾರ ಒಂದು ಆಶ್ವಾಸನೆಯನ್ನು ಕೊಟ್ಟಿತ್ತು. ಡಾ॥ ಹೆಚ್. ನರಸಿಂಹಯ್ಯನವರ ಜ್ಞಾಪಕಾರ್ಥ ಒಂದು ಸ್ಮಾರಕವನ್ನು ಅವರ ಹೆಸರಿನಲ್ಲಿ ರಚನೆ ಮಾಡುತ್ತೇವೆ. ಪ್ರತಿ ವರ್ಷ ಅವರ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಒಂದು ಸ್ಮಾರಕ ಮಾಡುತ್ತೇವೆಂದು ಹೇಳಿದಿರಿ, ಅವರಿಗೆ ಸಂತಾಪ ಸೂಚನೆ ಸಲ್ಲಿಸುವಾಗ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿರಿ ಆ ಬಗ್ಗೆ ಎಲ್ಲೂ ಪ್ರಸ್ತಾಪವಿಲ್ಲ ಬಜೆಟ್‌ನಲ್ಲೂ ಇಲ್ಲ ಪೂರಕ ಅಂದಾಜಿನಲ್ಲೂ ಇಲ್ಲ ಅಂದರೆ ಹೆಚ್. ನರಸಿಂಹಯ್ಯನವರನ್ನು ಮರೆತುಬಿಟ್ಟರೇನೋ ಎನ್ನುವ ಗುಮಾನಿ ಬರುತ್ತಿದೆ. ಏಕೆಂದರೆ ನಾವಲ್ಲರೂ ಅದಕ್ಕೆ ಭಾಗಿಗಳು, ನಾವೆಲ್ಲಾ ಅವತ್ತು ಸರ್ಕಾರಕ್ಕೆ ಒತ್ತಾಯ ಮಾಡಿದೆವು ಸರ್ಕಾರದವರು ಹೇಳಿದರು, ಆದರೆ ಹಣವನ್ನು ಎಲ್ಲಿ ಕೊಟ್ಟಿದ್ದಾರೆ? ಹಣ ಕೊಟ್ಟಿಲ್ಲ. ದಯವಿಟ್ಟು ಮಾನ್ಯ ಸಿದ್ಧರಾಮಯ್ಯನವರನ್ನು ವಿನಂತಿಸಿಕೊಳ್ಳುತ್ತೇನೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್. ನರಸಿಂಹಯ್ಯನವರು ಈ ರಾಜ್ಯಕ್ಕೆ ಹೆಚ್ಚಿನ ಕೊಡುಗೆ ಕೊಟ್ಟಿದ್ದಾರೆ; ಈ ರಾಜ್ಯಕ್ಕೆ ದುಡಿದಿದ್ದಾರೆ, ಅವರನ್ನು ಅಲಕ್ಷ್ಯ ಮಾಡುವುದು ಅಷ್ಟೊಂದು ಯೋಗ್ಯವಲ್ಲ, ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ, ಅವರ ಸ್ಮಾರಕಕ್ಕೆ ಒಂದಿಷ್ಟು ಹಣವನ್ನು ತೆಗೆದು ಇಟ್ಟು, ಅವರ ಹೆಸರಿನಲ್ಲಿ ಸಂಶೋಧನಾ ಕೇಂದ್ರ ಮಾಡಬೇಕೆಂದು ಸೂಚನೆ ಮಾಡಲಾಗಿತ್ತು, ಆ ಬಗ್ಗೆ ವ್ಯವಸ್ಥೆ ಮಾಡಬೇಕು. ಮತ್ತೆ ಟಿಸಿಹೆಚ್ ಟ್ರೈನಿಂಗ್ ಮಾಡಿ ವಯೋಮಿತಿ ಮೀರಿರುವವರಿದ್ದಾರೆ. ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ ಕೆಲವರಿಗೆ ಮೂರ್ನಾಲ್ಕು ತಿಂಗಳಾದರೆ ಎಜ್‌ಬಾರ್ ಆಗುತ್ತದೆ. ಕೆಲವರಿಗೆ ಒಂದು ವರ್ಷದಲ್ಲಿ ಎಜ್‌ಬಾರ್ ಆಗುತ್ತದೆ. ಇನ್ನು ಕೆಲವರಿಗೆ 6 ತಿಂಗಳಲ್ಲಿ ಆಗುತ್ತದೆ ಅವರು ಜೀವನಪರ್ಯಂತ ಏನೂ ಉಪಯೋಗವಿಲ್ಲದೆ ನಿರುಪಯೋಗಿಗಳಾಗಿ ಇರುವ ಸ್ಥಿತಿ ಬರುತ್ತದೆ; ಅದೊಂದು ಪ್ರಮುಖವಾದ ಪ್ರಶ್ನೆ ಇದೆ, ಅದನ್ನು ಪರಿಶೀಲನೆ ಮಾಡಬೇಕು. ಇನ್ನು ಅರಣ್ಯ ಇಲಾಖೆ ನಾನು ಬಯಲು ಸೀಮೆಯಿಂದ ಬಂದವನು ನಮ್ಮಲ್ಲಿ ಇದ್ದ ಕಾಡೂ ಏನಾದರೂ ಹೋಗಿದ್ದಾರೆ, ಅದಕ್ಕೆ ಅರಣ್ಯ ಇಲಾಖೆಯವರೇ ಕಾರಣ ಬೇರೆ ಯಾರೂ ಇಲ್ಲ ನನಗನಿಸುತ್ತದೆ ಕೆಲವು ಅಧಿಕಾರಿಗಳಿಗೆ ಸಂಪೂರ್ಣವಾಗಿ ಎಲ್ಲಿ ಗಿಡಬೆಳೆಸಬೇಕು, ಎಲ್ಲಿ ಮರ ಬೆಳೆಸಬೇಕು, ಫಾರೆಸ್ಟ್ ಡೆವಲಪ್‌ಮೆಂಟ್ ಮಾಡುವ ಕಾನ್ಸೆಪ್ಟ್ ಎನು ಎಂಬ ಆಲೋಚನೆಯೇ ಇಲ್ಲ ನಾನು ನಮ್ಮ ಪಕ್ಕದ ರಾಜ್ಯದ ಆಂಧ್ರಪ್ರದೇಶದಲ್ಲಿ 78

ವರ್ಷಗಳಿಂದ ಫಾರೆಸ್ಟ್ ಡೆವಲಪ್‌ಮೆಂಟ್ ಮಾಡುತ್ತಿದ್ದಾರೆ ಹೋಗಿ ನೋಡಿಕೊಂಡು ಬನ್ನಿ ಅವರು ಹೇಗೆ ಮಾಡುತ್ತಾರೆ ನೋಡಿ ಎಂದು ಸುಮಾರು ಸಾರಿ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಇವರು ಗಿಡಗಳನ್ನು ನೆಡುವುದು ಎಲ್ಲಿ ಅಂದರೆ, ಹಸನಾದ ಭೂಮಿ ಎಲ್ಲಿ ತೋಡಲಿಕ್ಕೆ ಮೆತ್ತಗಿರುತ್ತದೋ ತಲಾ ಟ್ರೆಂಚ್‌ಗೆ ನೂರು ಅಂತ ತೋರಿಸಿ 25 ರೂಪಾಯಿನಲ್ಲಿ ಮಾಡಿಸಿಬಿಡುವುದು ಎಲ್ಲಿಯಾದರೂ ಸ್ವಲ್ಪ ಕಷ್ಟವಾದರೆ ಫಾರೆಸ್ಟ್‌ನಲ್ಲಿ ಆ ಕಡೆ ಹೋಗುವುದಿಲ್ಲ, ಗುಡ್ಡ ಬೆಟ್ಟ ಹತ್ತೋಲ್ಲ, ಗುಡ್ಡ ಬೆಟ್ಟದಲ್ಲಿ ಗಿಡ ಹಾಕೋಲ್ಲ, ಇದು ವ್ಯವಸ್ಥೆ, ಇದನ್ನು ಏನಾದರೂ ಮಾಡಿ ಮಾರ್ಪಾಡಿಸಿ, ಏಕೆಂದರೆ ನಾವು ಎಲ್ಲಾ ಕಡೆ ಪರಿಸರದ ಬಗ್ಗೆ ಸಾಕಷ್ಟು ಭಾಷಣ ಮಾಡುತ್ತೇವೆ, ಪರಿಸರ ಹಾಳಾಗಿಬಿಟ್ಟಿದೆ ಮರ ಗಿಡ ಅದು ಇದು ಎಲ್ಲಾ ಹೋಯಿತು ಅಂತ, ಆದರೆ ಯೋಜನಾಬದ್ಧವಾಗಿ ಫಾರೆಸ್ಟ್ ಬೆಳೆಸಿದ್ದೇವೆಯೇ? ಒಟ್ಟು ಭೂಮಿಯಲ್ಲಿ 30 ಪರ್ಸೆಂಟ್ ಅರಣ್ಯ ಇರಬೇಕು ಅಂತ ಇದೆ. ನಾವು ಅದಕ್ಕೆ ಏನು ಮಾಡಿದ್ದೇವೆ ಅದಕ್ಕೆಂದು ಎರಡು ಇಲಾಖೆಗಳು, ಒಂದು ಸಾಮಾಜಿಕ ಅರಣ್ಯ ಇನ್ನೊಂದು ರೆಗ್ಯುಲರ್ ಅರಣ್ಯ, ಯಾಕೆ ಆ ಎರಡು ಇಲಾಖೆಯನ್ನು ಸಪರೇಟ್ ಮಾಡಿದಿರೋ ಅವರಿಗೆ ಏನು ಸಪರೇಟ್ ಕೆಲಸಗಳು? ಎಲ್ಲಿ ಏನು ಮಾಡುತ್ತಾರೆ ಗೊತ್ತಿಲ್ಲ ಇನ್ನು ತೋಟಗಾರಿಕೆ ಇಲಾಖೆ. ಅದನ್ನೂ ಎನು ಪ್ರಯೋಜನವಿಲ್ಲ ಮುಚ್ಚಿಬಿಡಿ. ನೀವು ಅದಕ್ಕೆ 6 ಕೋಟಿ ರೂ. ಕೊಡುತ್ತೀರಿ ಅದು ನೌಕರರ ಸಂಬಳಕ್ಕೆ ಸಾಲುವುದಿಲ್ಲ, ಯಾವ ತೋಟಗಾರಿಕೆಯನ್ನೂ ಡೆವಲಪ್ ಮಾಡುವುದಿಲ್ಲ, ಏನೂ ಮಾಡುವುದಕ್ಕಾಗುವುದಿಲ್ಲ ಈ ತರಹದ ಸ್ಥಿತಿ. ಆದ್ದರಿಂದ ಇವನ್ನೆಲ್ಲಾ ಏನೂ ಪ್ರಯೋಜನವಾಗುವುದಿಲ್ಲ ಬದಲಿಗೆ ನಷ್ಟ ಮಾಡಿಕೊಳ್ಳುವುದು ಅಷ್ಟೇ. ಕರೆಕ್ಟಾಗಿ ಮಾಡದೆ ಇದ್ದಾಗ ನಷ್ಟವೇ. ಸಮಾಜ ಕಲ್ಯಾಣ ಇಲಾಖೆಯಲ್ಲಿ ನಾನು ಎರಡು ವಿಚಾರ ಮಾತ್ರ ಹೇಳಬಯಸುತ್ತೇನೆ: ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಮನೆ ಏನು ಕೊಡುತ್ತಿದ್ದೀರಿ ಇದರ ಬಗ್ಗೆ ನಾವೊಂದು ಆಲೋಚನೆ ಮಾಡೋಣ ಪ್ರಾಯೋಗಿಕವಾಗಿ; ಇವತ್ತಿನ ಸ್ಥಿತಿಯಲ್ಲಿ 2025 ಸಾವಿರ ರೂಗಳಲ್ಲಿ ಒಂದು ಮನೆ ಕಟ್ಟಿಕೊಳ್ಳಿ ಎಂದು ಹೇಳುತ್ತಿದ್ದೇವೆ. ಅಂದರೆ ನಾವು ಯಾವ ಕಾಲದಲ್ಲಿದ್ದೇವೆ ಅಂತ ಆಲೋಚನೆ ಮಾಡಬೇಕಾಗುತ್ತದೆ. 25 ಸಾವಿರ ರೂ. ಕೊಟ್ಟು ನೀವು ಆಶ್ರಯ ಮನೆ ಕಟ್ಟಿಕೊಳ್ಳಿ ಅಂತ ಹೇಳುತ್ತೇವಲ್ಲಾ ಇವತ್ತಿನ ಸಿಮೆಂಟ್ ರೇಟ್ ಏನು ಇಟ್ಟಿಗೆ ರೇಟ್ ಏನು ಐರನ್ ರೇಟ್ ಏನು ಮರದ ರೇಟೇನು ಕೂಲಿ ಎಷ್ಟು? ನಾವು ಯಾವ ಕಾಲದಲ್ಲಿ ಯಾವ ದೇಶದಲ್ಲಿದ್ದೇವೆ? 1996ಕ್ಕೆ ಮೊದಲು 15 ಸಾವಿರ ರೂ. ಇತ್ತು. ಮಾನ್ಯ ರಾಯರೆಡ್ಡಿಯವರು 20 ಸಾವಿರ ರೂ. ಮಾಡಿದ್ದು ಆದರೆ ಅದು ಇವತ್ತೂ ಅಷ್ಟೇ ಇದೆ. ಆದರೆ ನಮ್ಮದು ಮಾತ್ರ ಎಲ್ಲಾ ಹೆಚ್ಚಾಗುತ್ತಿರುತ್ತದೆ. ಇವತ್ತೊಂದು ಬಿಲ್ ಪಾಸ್ ಮಾಡಿದೆವು, ಮಂತ್ರಿಗಳ ಶಾಸಕರ ಸಂಬಳ ಅದು ಇದು ಜಾಸ್ತಿ ಅಂತ ಅವರಿಗೆ ಮಾತ್ರ ನಾವು ಯಾಕೆ ಜಾಸ್ತಿ ಮಾಡಲು ಪ್ರಯತ್ನ ಮಾಡುವುದಿಲ್ಲ? ಶ್ರೀ ಎಸ್. ರಾಜೇಂದ್ರನ್: ನಮ್ಮದೆಲ್ಲಾ ನಿಲ್ಲಿಸಿ, ಅವರಿಗೆ ಮಾಡಲೇಬೇಕು. ಶ್ರೀ ಜಿ. ಪಿ. ಶ್ರೀರಾಮರೆಡ್ಡಿ 25 ಸಾವಿರದಲ್ಲಿ ಮನೆ ಕಟ್ಟಲು ಆಗುವುದೇ ಅಂತ ವಾಸ್ತವವಾಗಿ ಆಲೋಚಿಸೋಣ. ಆಶ್ರಯ ಮನೆ ಟೆನ್ ಬೈ ಟ್ವೆಂಟಿ, ಒಂದು ಚದರಡಿಗೆ ಎಷ್ಟು ಖರ್ಚಾಗುತ್ತದೆ ಅಂತ. ಯಾಕೆ ಈ ಮಾತು ಹೇಳುತ್ತಿದ್ದೇನೆ ಅಂದರೆ 20 ಸಾವಿರದಲ್ಲಿ ಮನೆ ಕಟ್ಟಲಾಗದೆ ಅರ್ಧಂಬರ್ಧ ಕಟ್ಟಿ ದುಡ್ಡು ತಿಂದು ದುಡ್ಡು ಸಾಕಾಗದೆ ಇವತ್ತು ರಾಜ್ಯದಲ್ಲಿ ಸುಮಾರು ಕಡೆ ಬಿಟ್ಟು ಬಿಟ್ಟಿದ್ದಾರೆ. ಇನ್ನೂ ದುರಂತ ಏನೆಂದರೆ ಕೆಲವು

ಸ್ಕೀಂಗಳಲ್ಲಿ ಕಟ್ಟಿದಂತಹ ಮನೆಗಳಿಗೆ ಹತ್ತಾರು ವರ್ಷವಾಗಿದೆ, ಇವತ್ತಿಗೂ ಹಣ ಬಿಡುಗಡೆಯಾಗಿಲ್ಲ, ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಮನೆಗಳಿಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ. ನಾನು ಕಳಕಳಿಯಿಂದ ವಿನಂತಿ ಮಾಡುತ್ತೇನೆ: ಆಶ್ರಯ ಮನೆಗಳು ಬಡವರ ಮನೆಗಳು, ಮೊನ್ನೆ ಯಾರಿಗೋ ನಾನು ಹೇಳಿದೆ ಮಾಸ್ಟರ್ ಬಾತ್‌ರೂಂಗೆ 10 ಲಕ್ಷ ರೂಪಾಯಿ ಖರ್ಚು ಮಾಡಿರುವವರಿದ್ದಾರೆ ಈ ದೇಶದಲ್ಲಿ ಕೆಲವು ಐಎಎಸ್ ಅಧಿಕಾರಿಗಳು ಅಂತ ಅವರಿಗೆ 25 ಸಾವಿರ ರೂಪಾಯಿ ಕೊಡುತ್ತೇವೆ, ಅದು ಹೇಗೆ ಸಾರ್ ಸಾಕಾಗುತ್ತದೆ? ಆದ್ದರಿಂದ ಅದನ್ನು ಕನಿಷ್ಟ 40 ಸಾವಿರ ರೂ. ಮಾಡಬೇಕಾಗುತ್ತದೆ. 40 ಸಾವಿರ ರೂ. ಮಾಡದೇ ಇದ್ದರೆ ದಯವಿಟ್ಟು ಆಶ್ರಯ ಸ್ಕೀಮನ್ನು ರದ್ದು ಮಾಡಿಬಿಡಿ. ಅದು ಬೇಡವೇ ಬೇಡ ಇವತ್ತು ಅಂಥ ಸ್ಥಿತಿ ಬಂದುಬಿಟ್ಟಿದೆ 40 ಸಾವಿರ ರೂ. ಇಲ್ಲದೆ ಏನೂ ಮಾಡಲು ಆಗುವುದಿಲ್ಲ, ಅದನ್ನು ನೀವು ಹೆಚ್ಚು ಮಾಡಬೇಕು ಅಂತ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ ಆಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದರು, ಎಸ್‌ಸಿ:ಎಸ್‌ಟಿ ಹುಡುಗರಿಗೆ ಸೀಟ್ಸ್ ಕಡಿಮೆ ಇದೆ, ತಾಲ್ಲೂಕಿನಲ್ಲಿ, ಇನ್‌ಟೇಕಿಂಗ್ ಕಡಿಮೆ ಸ್ಟೆಂಥ್ ಜಾಸ್ತಿ ಆಗುತ್ತಿದೆ ಅಂತ ಅವರಿಗೆ ಶಿಕ್ಷಣ ಕೊಡಬೇಕು, ಶೈಕ್ಷಣಿಕವಾಗಿ ಮುಂದೆ ತಗಬೇಕು ಅಂತ ನಾವೆಲ್ಲಾ ಸೇರಿಕೊಂಡು ಭಾಷಣ ಮಾಡುತ್ತೇವೆ. ಆದರೆ ಅವರಿಗೆ ಬೇಕಾಗಿರುವ ಸವಲತ್ತು ಒದಗಿಸದೆನೇ ನಾವು ಹೇಗೆ ಅವರನ್ನು ಮೈನ್‌ಸ್ಟ್ರೀಮ್‌ಗೆ ತರುವುದು? ಎಲ್ಲಿ ಅವರಲ್ಲಿ ಪ್ರಜ್ಞಾ ಜಾಸ್ತಿ ಮಾಡುವುದು? ಬರೀ ಭಾಷಣದಲ್ಲೇ ಮಾಡುವುದಾ? ಹಾಸ್ಟೆಲ್ ಜಾಸ್ತಿ ಮಾಡಿ, ಸೀಟುಗಳನ್ನು ಜಾಸ್ತಿ ಮಾಡಿ. ಹಾಸ್ಟೆಲ್‌ಗಳಿಗೆ ಕೊಡಿ ನಮಗೆ ಹಿಂಸೆಯಾಗುತ್ತದೆ, ಹಾಸ್ಟೆಲ್ ಸೀಟ್ ಸೆಲೆಕ್ಟ್ ಮಾಡಿರಿ. ಅಂತ ಹೇಳುತ್ತೀರಿ. ಆ ಮಕ್ಕಳೆಲ್ಲಾ ಬಂದು ನಮಗೆ ಸೀಟು ನಮಗೆ ಸೀಟು ಎನ್ನುತ್ತಾರೆ. ಅದರಲ್ಲಿ ಈ ನೀವು ಏನು ಮಾಡಿರುತ್ತೀರಿ? ಇಷ್ಟೇ ಸೀಟು; ಒಂದು ಸೀಟು ಹೆಚ್ಚಾಗುವ ಹಾಗಿಲ್ಲ; ಆ ಮಕ್ಕಳನ್ನು ಏನು ಮಾಡಬೇಕು? ಅವರಿಗಾಗಿ ಉತ್ತಮಸ್ಥಿತಿ ಇವತ್ತು ನಿರ್ಮಾಣ ಮಾಡದೇ ಹೋದರೆ ಖಂಡಿತ ಅವನ್ನು ಭಾಷಣಗಳಲ್ಲೇ ಸಾಯಿಸಿಬಿಡುತ್ತೇವೆ ಅಷ್ಟೇ. ನಿಜವಾಗಿ ಕೊಡಲಿಕ್ಕಾಗುವುದಿಲ್ಲ, ಒಂದು ಅವರಿಗೆ ಸೀಟು ಹೆಚ್ಚಿಸಬೇಕು ಸವಲತ್ತುಗಳನ್ನು ಹೆಚ್ಚಿಗೆ ಕೊಡಬೇಕು ಅದಕ್ಕಿಂತ ಬಹಳ ನೋವಿನ ಸಂಗತಿ ಇಡೀ ರಾಜ್ಯದಲ್ಲಿ ಸುಮಾರು ಹಾಸ್ಟೆಲ್‌ಗಳಲ್ಲಿ ದುರುಪಯೋಗವಾಗುತ್ತಿದೆ; ಯಾರೋ ಕೆಲವು ದಲ್ಲಾಳಿಗಳು ಸೇರಿಕೊಂಡು ಆ ಮಕ್ಕಳಿಗೆ ಸಿಕ್ಕಬೇಕಾದ ಸವಲತ್ತುಗಳನ್ನೆಲ್ಲಾ ಬೆದರಿಸಿ ಗೂಂಡಾಗಿರಿ ಮಾಡಿ ತಾವು ಉಪಯೋಗಿಸಿಕೊಳ್ಳುವ ಸ್ಥಿತಿ ಬಂದಿದೆ. ಇದು ನನ್ನ ಪ್ರಾಮಾಣಿಕವಾದಂಥ ಅಬ್ಸರ್ವೇಶನ್. ನೀವು ಅದನ್ನು ತಡೆಗಟ್ಟಬೇಕು. ನಾನೊಂದು ಉದಾಹರಣೆ ಹೇಳುತ್ತೇನೆ: ಹಾಸ್ಟೆಲ್‌ನಲ್ಲಿ ಅಕೌಂಟ್ಸ್ ಬರೆಯಲು ಒಬ್ಬನನ್ನು ಇಟ್ಟಿರುತ್ತಾರೆ; ಹಾಸ್ಟೆಲ್‌ನಲ್ಲಿ ಬೋರ್ಡರ್ಸ್ ಯಾರು ಯಾರರು ಬಂದು ಊಟ ಮಾಡಬೇಕು ಅಂತ ಡೈಲಿ ಅವನು ಅಟೆಂಡೆನ್ಸ್ ಹಾಕಬೇಕು. ಅವನನ್ನು ಅಲ್ಲಿ ಕೂತು ಕೊಳ್ಳಲು ಬಿಡುವುದಿಲ್ಲ ಕೆಲವರು, ಯಾಕೆಂದರೆ ಲೆಕ್ಕ ಬರೆಯುತ್ತಾನೆ. ಯಾರ್ಯಾರು ಬರುತ್ತಾರೆ ಅಂತ, ಆ ಲೆಕ್ಕ ಬರೆಯದ ಹಾಗೆ ಮಾಡಲು ಅವನು ಅಲ್ಲಿ ಕೂರಲು ಬಿಡುವುದೇ ಇಲ್ಲ ಓಡಿಸಿಬಿಡುತ್ತಾರೆ. ಮಕ್ಕಳು ಪಾಪ ಹೆದರುತ್ತಾರೆ, ಅವರಿಗೆ ಕೊಟ್ಟಿದ್ದನ್ನು ಇವರು ತಿಂದುಬಿಟ್ಟು ಹೋಗಿಬಿಡುವುದು. ಈ ಸ್ಥಿತಿ ನಿರ್ಮಾಣವಾಗಿದೆ. ಆ ದುರುಪಯೋಗವನ್ನು ತಡೆಯಬೇಕು. ಸೀಟುಗಳನ್ನು ಹೆಚ್ಚು

ಮಾಡಬೇಕು ಅವರಿಗೆ ಕೊಡುತ್ತಿರುವ ಸವಲತ್ತುಗಳನ್ನು ಹೆಚ್ಚು ಮಾಡಬೇಕು ಅದಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕು ಎಂಬುದು ನನ್ನ ಮುಖ್ಯವಾದಂಥ ಬೇಡಿಕೆ. ಮತ್ತೆ ಸಣ್ಣ ನೀರಾವರಿ ಹಣವನ್ನು ಸ್ವಲ್ಪ ಜಾಸ್ತಿ ಮಾಡಿದ್ದೀರಿ, ಹೋದ ಬಜೆಟ್‌ನಲ್ಲೂ ಮಾಡಿದ್ದೀರಿ ಇದರಲ್ಲೂ ಮಾಡಿದ್ದೀರಿ. ಆದರೆ ಅದು ಪ್ರಮೋರ್ಶನೇಟ್ ಈಕ್ವಲ್‌ಆಗಿಲ್ಲ ಸಣ್ಣ ನೀರಾವರಿಗೆ ಒಳಪಡುವ ಕೃಷಿ ಭೂಮಿ ಎಷ್ಟು; ಅದಕ್ಕೆ ನೀರುಣಿಸಬೇಕಾದರೆ ಎಷ್ಟು ಹಣ ಬೇಕು; ಆ ಪ್ರಮಾಣದಲ್ಲಿ ಹಂಚಿಕೆ ಆಗುತ್ತಾ ಇಲ್ಲ. ಏನೋ ಎಲ್ಲಾ ಇಲಾಖೆಗಳಿಗೆ ಕೊಟ್ಟಂತೆ ಅದಕ್ಕೂ ಒಂದಷ್ಟು ಕೊಡುವುದು. ಇಲ್ಲ, ಸ್ವಲ್ಪ ಜಾಸ್ತಿ ಮಾಡುವುದು, ಅದು ಪ್ರಯೋಜನವಾಗುವುದಿಲ್ಲ. We must have a scientific approach. Major Irrugation ನಿಂದ ಇವತ್ತೆಷ್ಟು ಇರಿಗೇಟಾಗುತ್ತಿದೆ ನಾವು ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಅಂತ. ಮೈನರ್ ಇರಿಗೇಶನ್ ನಿಂದ ಎಷ್ಟು ಇರಿಗೇಟ್ ಆಗುತ್ತಿದೆ ನಾವೆಷ್ಟು ಖರ್ಚು ಮಾಡುತ್ತಿದ್ದೇವೆ ಅಂತ. ದಯವಿಟ್ಟು Comparative study ಮಾಡಿ ನಾವು ಯಾರ ವಿರುದ್ಧವೂ ದೂರುತ್ತಾ ಇಲ್ಲ, Minor Irrigation ಅನ್ನು ನೀವು ಡೆವಲಪ್ ಮಾಡದೇ ಹೋದರೆ under ground water level increase ಮಾಡಲು ಸಾಧ್ಯವಿಲ್ಲ What is the way out to increase the under ground water level? That has become a serious problem. Now under ground water level increase ಮಾಡಬೇಕಾದರೆ ಕೆರೆ ಕುಂಟೆ ಕಟ್ಟೆ ಬಾವಿಗಳನ್ನು ಸರಿಪಡಿಸ ಬೇಕು ಇಲ್ಲದಿದ್ದರೆ ನೀವು under ground water levelಅನ್ನು ಹೆಚ್ಚು ಮಾಡಲು ಸಾಧ್ಯವಿಲ್ಲ ಎರಡನೆಯದು ಸಣ್ಣ ನೀರಾವರಿಯಲ್ಲಿ ಎಷ್ಟು ಕೃಷಿಯಾಗುತ್ತದೆ ಅದಕ್ಕೆ ಕಾಸ್ಟ್ ಎಷ್ಟು ಅಂತ ನಾವು ಲೆಕ್ಕ ಹಾಕುತ್ತಿಲ್ಲ ಬರೀ ಭಾರಿ ನೀರಾವರಿ ಬಗ್ಗೆ ಮಾತನಾಡುತ್ತೇವೆ ಅದು ಬೇಡ ಅಂತ ನಾನು ಹೇಳುವುದಿಲ್ಲ, ಅದು ಬೇಕು. ಆದರೆ ಭಾರಿ ನೀರಾವರಿಯಲ್ಲಿ ಭಾರೀ ಅವ್ಯವಹಾರ ಆಗುತ್ತಾ ಇದೆ. ಸಣ್ಣ ನೀರಾವರಿಯಲ್ಲಿ ಸಣ್ಣ ಅವ್ಯವಹಾರ, ಆದ್ದರಿಂದ ಸಣ್ಣ ನೀರಾವರಿಗೆ ನೀವು ದಯವಿಟ್ಟು ಅಗತ್ಯವಿರುವಷ್ಟು ಹಣ ಕೊಡಿ. ಕಾಟಾಚಾರಕ್ಕೆ ಒಂದಷ್ಟು ಹಣ ಕೊಡುವುದು ಬೇಡ ಎಂಬುದು ನನ್ನ ಅಭಿಪ್ರಾಯ. ಮತ್ತೆ ಬಜೆಟ್‌ನಲ್ಲಿ ಹೇಳಿದ್ದೀರಿ. ಕೃಷಿ ಸಂಶೋಧನೆಗೆ ಹಣವನ್ನು ಅದನ್ನು ಪ್ರತ್ಯೇಕವಾಗಿ ಮಾಡುತ್ತೇವೆಂದು ನೀವು ಹೇಳಿದ್ದೀರಿ. ಏನು ಮಾಡಿದ್ದೀರಿ ಎಂಬುದು ಎಲ್ಲೂ ಕೂಡ ಕಾಣುತ್ತಿಲ್ಲ ಮತ್ತೆ ಸಮಾಜಕಲ್ಯಾಣ ಇಲಾಖೆಯ ಅಡಿಯಲ್ಲಿ ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ಕೂಡ ಬರುತ್ತದೆ. ಆ ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್‌ನಲ್ಲಿ ಒಂದು ಐಸಿಡಿಸಿ ಪ್ರೋಗ್ರಾಮ್ ಆಫ್‌ಕೋರ್ಸ್ ಅದರಲ್ಲಿ 70 ಪರ್ಸೆಂಟ್ ಸೆಂಟ್ರಲ್ ಗೌರ್ನಮೆಂಟ್ ಶೇರು ಇದೆ. ಉಳಿದದ್ದು ಸ್ಟೇಟ್ ಗೌರ್ನಮೆಂಟ್ ಶೇರು ಇದೆ. ಟೋಟಲ್ ಐಸಿಡಿಸಿ ಸ್ಕೀಮನ್ನು ಮಾಡಿರುವುದೇ ಸೆಂಟ್ರಲ್ ಗೌರ್ನಮೆಂಟ್.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, There is state sector. Some taluks are central sector programmes. Some taluks are state sector programmes.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಇಡೀ ಐಸಿಡಿಸಿ programme ಜಾಕ್ ಪಾಟ್ ಮಾಡಿದ್ದೇ ಸೆಂಟ್ರಲ್ ಗೌರ್ನಮೆಂಟ್.

ಶ್ರೀ ಬಸವರಾಜ ರಾಯರೆಡ್ಡಿ : ಸ್ಟೇಟ್ ಗೌರ್ನಮೆಂಟ್ ಕಾಪಿ ಮಾಡಿದ್ದಾರೆ. In our district, Kustagi taluk is under central sector Yelburga taluk is under the State sector.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಹೀಗಾಗಿ ಆ ಪೌಷ್ಟಿಕ ಆಹಾರವನ್ನು ಸಣ್ಣ ಮಕ್ಕಳಿಗೆ ಏನು ಸಪ್ಲೈ ಮಾಡುತ್ತಿದ್ದಾರೆ ಐಸಿಡಿಸಿ ಸೆಂಟರ್ಸ್‌ಗೆ, ಅಂಗನವಾಡಿ ಕೇಂದ್ರಗಳಿಗೆ, ಅದರಲ್ಲಿ ಬಾರೀ ಕಳಪೆ ಅವ್ಯವಹಾರಗಳು ನಡೆಯುತ್ತೆ ಮತ್ತೆ ಆ ಅಂಗನವಾಡಿ ಕಾರ್ಯಕರ್ತೆಯರಿಗೆ ಏನಾದರೂ ಒಂದು ಸೆಕ್ಯುರಿಟಿಯನ್ನು ಕೊಡಿ. ಅವರು ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ಯಾವತ್ತು ರಿಟೈರ್ ಮಾಡುತ್ತೀರಿ? ಯಾವ ಎಜ್‌ಗೆ ರಿಟೈರ್ ಮಾಡುತ್ತೀರಿ ಅಥವಾ ವಯಸ್ಸಿಗೆ ರಿಟೈರ್ ಮಾಡುತ್ತೀರಾ? ರಿಟೈರ್ ಆಗಿ ಹೋಗುವಾಗ ಏನು? ಅವರು ಬರಗೈಯಲ್ಲಿ ಹೋಗಬೇಕಾ ಅಥವಾ ಅವರನ್ನು ರಿಟೈರ್ ಮಾಡುವುದಿಲ್ಲವೇ ಏನಾದರೂ ಒಂದು ನಿಯಮ ಅದಕ್ಕೆ ಬೇಕಲ್ಲವೇ? ಅದೇನೂ ಇಲ್ಲ. ಇವತ್ತಿಗೂ ಅದನ್ನು ಮಾಡಿಲ್ಲ ಸುಮಾರು ವರ್ಷಗಳಿಂದ ಅವರು ಹೋರಾಟವನ್ನು ನಡೆಸುತ್ತಿದ್ದಾರೆ. ನೀವು ಸಂಬಳವನ್ನು ಎಷ್ಟು ಕೊಡುತ್ತೀರಿ ಎನ್ನುವುದು ಅದು ಸೆಕೆಂಡರಿ ಪಾಯಿಂಟ್. ಕನಿಷ್ಟ ಅವರಿಗೊಂದು ಸೆಕ್ಯುರಿಟಿ. ನೀವಿಷ್ಟು ದಿವಸ ಕೆಲಸವನ್ನು ಮಾಡಬೇಕು, ಇಷ್ಟು ದಿವಸವಾದ ಮೇಲೆ ನಿವೃತ್ತಿಯಾಗಬೇಕು, ನಿವೃತ್ತಿಯಾದಮೇಲೆ ಏನು ಕೊಡುತ್ತೀರಿ? ಅಟ್‌ಲೀಸ್ಟ್ ಇದೊಂದು ಎಲ್ಲರಿಗೂ ನಿವೃತ್ತಿ ಇರುತ್ತದೆ. ಹೋಗಲಿ, ಅವರಿಗೆ ಇಷ್ಟು ದಿವಸ ಕೆಲಸ ಮಾಡಬೇಕೆಂದೇನಾದರೂ ನಿಗದಿ ಮಾಡಿದ್ದೀರಾ? ಇವತ್ತಿಗೂ ನಿಗದಿ ಮಾಡಿಲ್ಲ ಎಷ್ಟು ವರ್ಷ ನೀವು ಕೆಲಸವನ್ನು ಮಾಡಬೇಕು, ಎಜ್? ಏನೂ ನಿಗಧಿ ಮಾಡಿಲ್ಲ. ಈ ರೀತಿ ಅಸ್ತವ್ಯಸ್ತದಲ್ಲಿ ಬಿಟ್ಟು ಬಿಟ್ಟರೆ ಬಾರಿ ತೊಂದರೆಯಾಗುತ್ತದೆ. ಸಾಮಿಯರು ಜನ ಹೆಣ್ಣುಮಕ್ಕಳು ಅವರನ್ನೆಲ್ಲಾ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತೀರಿ. ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಜಾರಿ ಮಾಡುವುದು ಅಂಗನವಾಡಿ ಕಾರ್ಯಕರ್ತೆಯರೇ ಕಡೆಗೆ ಮಂತ್ರಿಗಳು ಹೋದರೆ ಭಾಷಣ ಕೇಳುವುದಕ್ಕೆ ಅವರನ್ನು ಕರೆದುಕೊಂಡು ಬರತಕ್ಕಂಥದ್ದು. ಆದರೆ ಅವರಿಗೆ ಸವಲತ್ತುಗಳನ್ನು ಮಾತ್ರ ಇಲ್ಲದೇ ಇರುವ ಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ದಯವಿಟ್ಟು ಅವರಿಗೆ ಅನುಕೂಲವನ್ನು ಮಾಡಿಕೊಡಬೇಕು. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಒಂದು ಬಹಳ ಪ್ರಮುಖವಾದುದು ನಾನು ಕೇಳತಕ್ಕದ್ದು. ಆ ರಸ್ತೆಗಳಿಗೆ ಏನಾದರೂ ಮಾಡಿ. ಏಕೆಂದರೆ ಈಗ ಏನಾಗುತ್ತೆ ಪಿಡಬ್ಲ್ಯೂಡಿ ರಸ್ತೆ, ಎಂಡಿಆರ್‌ಗಳು, ವಿಡಿಆರ್‌ಗಳು ಸ್ಟೇಟ್ ಹೈವೇಸ್, ನ್ಯಾಷನಲ್ ಹೈವೇಸ್ ಕ್ಯಾಟಗರಿಗಳನ್ನು ಮಾಡಿದ್ದಾರೆ. ಈಗ ನ್ಯಾಷನಲ್ ಹೈವೇಸ್‌ಗೆ ಅಷ್ಟೇ ಹಣ ಸಿಗುತ್ತದೆ. ಸ್ಟೇಟ್ ಹೈವೇಗೆ ಹಣ ಸಿಗುತ್ತೆ. ಪಿಡಬ್ಲ್ಯೂಡಿ ರೋಡಿಗೆ ಅಷ್ಟು ಇಷ್ಟು ಹಣ ಸಿಗುತ್ತೆ ಆದರೆ ಆ ಜಿಲ್ಲಾ ಪಂಚಾಯಿತಿ ರಸ್ತೆಗಳಿಗೆ ಹಣವೇ ಇಲ್ಲ. ನೀವು ಸಿಎಡಿಎಸ್ ನಲ್ಲಿ ಕೊಡುತ್ತೇವೆಯೆಂದು ಹೇಳುತ್ತೀರಿ. ಒಂದು ತಾಲ್ಲೂಕಿಗೆ 3040 ಲಕ್ಷ ರೂಪಾಯಿಗಳನ್ನೂ ನೀವು ಕೊಡುತ್ತೀರಿ. ಅದರಲ್ಲಿ ನೀವು ಯಾವುದ್ಯಾವುದೋ ಡೈಲಿವೇಜಸ್ ಅದು ಇದು ಸ್ಟಿಲ್ ಎಲ್ಲಾ ಹೋಗಿಬಿಟ್ಟರೆ ಹತ್ತು ಲಕ್ಷ, ಐದು ಲಕ್ಷ ರೂಪಾಯಿಗಳೂ ಕೂಡ ಒಂದು ತಾಲ್ಲೂಕಿಗೆ ಉಳಿಯುವುದಿಲ್ಲ ಏನು ಮಾಡುವುದಕ್ಕಾಗುತ್ತದೆ? ಇವತ್ತು ಇಡೀ ಜಿಲ್ಲಾ ಪಂಚಾಯಿತಿ ರಸ್ತೆಗಳು ಹಾಳಾಗಿ ಹೋಗಿದೆ ಓಡಾಡುವುದಕ್ಕೆ ಸಾಧ್ಯವಿಲ್ಲ ಜಿಲ್ಲಾ ಪಂಚಾಯಿತಿಯಲ್ಲಿ ಹಣ ಇಲ್ಲ. ರಸ್ತೆಗಳನ್ನು

ಮಾಡುವುದಕ್ಕೆ ಹಣ ಇಲ್ಲ. ಮತ್ತೆ ನೀವೇನು ಹಣ ಕೊಡುತ್ತೀರಿ, ಅದರಲ್ಲಿ ಹೇಳುತ್ತೀರಿ, ಇದನ್ನು ರಸ್ತೆಗಳಿಗೆ ಉಪಯೋಗಿಸಬಾರದು, ಇಂಥದ್ದಕ್ಕೆ ಉಪಯೋಗಿಸಬಾರದೆಂದು ಹೇಳಿರುತ್ತೀರಿ, ಹಾಗಾದರೆ ಜಿಲ್ಲಾ ಪಂಚಾಯಿತಿ ರಸ್ತೆಗಳಿಗೆ ಹಣ ಎಲ್ಲಿ? ಆ ಜಿಲ್ಲಾ ಪಂಚಾಯಿತಿ ರಸ್ತೆಗಳನ್ನು ಯಾರು ಡೆವಲಪ್ ಮಾಡಬೇಕು?

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಬಜೆಟ್‌ನಲ್ಲಿ ಈಗಾಗಲೇ ಇದರ ಬಗ್ಗೆ ಡೀಟೈಲ್ಸ್ ಎಲ್ಲಾ ಮಾತನಾಡಿದ್ದೀರಿ ಸ್ವಲ್ಪ ಬೇಗನೆ ಮುಗಿಸಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಹಾಗಾಗಿ ಆ ರಸ್ತೆಗಳಿಗೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕು ಕಡೆಯದಾಗಿ ಕೈಗಾರಿಕಾ ಇಲಾಖೆಯ ಸಾರ್ವಜನಿಕ ಉದ್ಯಮಗಳು. ಅದರ ಬಗ್ಗೆ ನಾವು ಸಾಕಷ್ಟು ಸಲ ಹೇಳಿದ್ದೇವೆ. ಏನೂ ಪ್ರಯೋಜನವಾಗಲಿಲ್ಲ ಲಾಭದಾಯವಾಗಿ ನಡೆಯುತ್ತಿರುವ ಸಾರ್ವಜನಿಕ ಉದ್ಯಮಗಳನ್ನು ನಾವು ಉಳಿಸಿಕೊಳ್ಳುತ್ತೇವೆಂದು ಹೇಳಿ ನೀವು ಆಶ್ವಾಸನೆಯನ್ನೂ ಕೊಟ್ಟಿದ್ದೀರಿ. ನಷ್ಟವಾಗುತ್ತಿರುವುದನ್ನು ಬಿಡಿ. ಅದು ಸಾಧ್ಯವೇ ಇಲ್ಲ. ಅದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಇಂಡಸ್ಟ್ರಿಗಳನ್ನು ಬಿಟ್ಟು ಬಿಡಿ. ಹೋಗಲಿ. ಅಟ್‌ಲೀಸ್ಟ್ ಯಾವುದು ಮಿನಿಮಮ್ ಆಗಿ ನಡೆಯುತ್ತಿರುವ ಕಾರ್ಖಾನೆಗಳಿವೆ, ಮೈಸೂರ್ ಲ್ಯಾಂಪ್ಸ್, ಎನ್‌ಜಿಇಎಫ್, ಕೆಎಸ್‌ಡಿಎಲ್. ಅವೆಲ್ಲಾ ಎಲ್ಲಿಯೂ ನಷ್ಟ ಹೊಂದುತ್ತಿಲ್ಲ ನನಗೆ ಪ್ರಾಮಾಣಿಕವಾಗಿ ಅನಿಸಿದ್ದನ್ನು ನಾನು ಹೇಳುತ್ತಿದ್ದೇನೆ, ಈ ಸಾರ್ವಜನಿಕ ಉದ್ಯಮಗಳನ್ನು ನಾಶ ಮಾಡಿದವರು ಐಎಎಸ್ ಆಫೀಸರ್ಸ್ ಇಡೀ ಸಾರ್ವಜನಿಕ ಉದ್ಯಮಗಳನ್ನು ನಾಶ ಮಾಡಿದ್ದೇ ಅವರು. ನಾನು ಮೊನ್ನೆ ಕೂಡ ಒಂದು ಕಡೆಯಲ್ಲಿ ಹೇಳಿದೆ. ಒಬ್ಬ ಎಂಡಿ ಸೋಪ್ಸ್ ಅಂಡ್ ಡಿಟರ್ಜೆಂಟ್‌ನಲ್ಲಿ ವಿಪ್ರೋ ನವರಿಗೆ ಮಾರಾಟ ಮಾಡಲಿಕ್ಕೆ ಬೇಕಾಗಿರುವ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟು ಅವರಿಗೆ ಬೇಕಾಗಿರುವ ಎಲ್ಲಾ ಮಾಹಿತಿಯನ್ನು ಆತನೇ ಕರೆದುಕೊಂಡು ಬಂದು ಕಾರ್ಖಾನೆಯ ರೂಲ್ಸ್‌ಗೆ ವಿರುದ್ಧವಾಗಿ ವಿಪ್ರೋ ಕಂಪನಿಯ ಎಜೆಂಟ್ಸ್‌ಗಳನ್ನು ಕರೆದುಕೊಂಡು ಬಂದು ಅಲ್ಲೆಲ್ಲಾ ಮಾಹಿತಿಯನ್ನು ಅವನು ಕೊಟ್ಟು ಕಳುಹಿಸುತ್ತಾನೆ. ಅದನ್ನು ಇವತ್ತು ವಿಪ್ರೋದವರಿಗೆ ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ನೀವು ಹೇಳಿದಿರಿ, ಸಾರ್ವಜನಿಕ ಉದ್ಯಮಗಳು ಲಾಭದಲ್ಲಿರುವುದನ್ನು ಉಳಿಸಿಕೊಳ್ಳುತ್ತೇವೆಂದು ಹೇಳಿದ್ದು ಅದನ್ನು ನಷ್ಟಕ್ಕೆ ತೆಗೆದುಕೊಂಡು ಹೋಗಿಬಿಟ್ಟರೆ ಹೇಗೆ? ಉದ್ದೇಶ ಅದೇ. ಲಾಭದಲ್ಲಿ ಇದ್ದುದ್ದನ್ನು ನಷ್ಟಕ್ಕೆ ತೆಗೆದುಕೊಂಡು ಹೋಗಿ ತೋರಿಸಿ ಮಾರಾಟ ಮಾಡೋಣ ಎಂದು. ಅಷ್ಟೇ ವ್ಯವಸ್ಥೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದನ್ನೇ ನಾನು ಹೇಳಿದ್ದು. ಲಾಭ ಬರುತ್ತಿದ್ದುದ್ದನ್ನು ನಷ್ಟ ಮಾಡಿದಿರಿ ಉದಾಹರಣೆಗೆ: ಮೈಸೂರು ಲ್ಯಾಂಪ್ಸ್, ನಾನು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಆ ಐಎಎಸ್ ಆಫೀಸರ್ ಈಗ ಇಲ್ಲ, ಬದುಕಿಲ್ಲ. ಅವರು ಸತ್ತುಹೋಗಿದ್ದಾರೆ. ಅವರೇ ಕಾರಣ ಆ ಮೈಸೂರು ಲ್ಯಾಂಪ್ಸ್‌ನ್ನು ಹಾಳು ಮಾಡುವುದಕ್ಕೆ. ಬೇಕಾಬಿಟ್ಟಿಯಾಗಿ 500600 ಜನರನ್ನು ಅವಶ್ಯಕತೆ ಇಲ್ಲದಿದ್ದರೂ ಕೂಡ ಕೆಲಸಕ್ಕೆ ಸೇರಿಸಿಕೊಂಡುಬಿಟ್ಟರು. ಅದು ದಿವಾಳಿಯಾಗಿ ಹೋಯಿತು. ಬೇಕಾಬಿಟ್ಟಿಯಾಗಿ ಸೇರಿಸಿಕೊಂಡುಬಿಟ್ಟರು.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಅವರು ಮಾಡುತ್ತಾರೆ, ಇಲ್ಲವೆಂದರೆ. ಎಲ್ಲೋ ಒಂದು ಕಡೆ ನಾವು ಇರುತ್ತೇವೆಲ್ಲಾ, ನಮಗೂ ಸ್ವಲ್ಪ ಜಾಣ್ಮೆ, ಜವಾಬ್ದಾರಿ ಎನ್ನುವುದು ಇರಬೇಕಲ್ಲಾ. ಕಾಮರಾಜ್ ಏನು ಓದಿದ್ದರು? Kamaraj was one of the best Chief Ministers. No. I. A. S. Officer could play tricks with Kamaraj. ಯಾವಾಗ ನಾವೂ ಕೂಡ ಪರೋಕ್ಷವಾಗಿ ಅವರಿಗೆ ಈಲ್ಡ್ ಆಗತಕ್ಕ ಸಿಗ್ನಲ್ ಅನ್ನು ಕೊಡುತ್ತೇವೆ, ಆಗ ಇದೆಲ್ಲಾ these things can happen when bureaucrats and politicians connive. ಇಂಡಿಪೆಂಡೆಂಟ್ ಆಗಿ ಒಬ್ಬ ಯಾವುದೇ ಬ್ಯುರೋ ಕ್ರಾಟ್ ಆ ರೀತಿ ನಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಬ್ಬ ರಾಜಕಾರಣಿ ತನ್ನೆಲ್ಲಾ ತಪ್ಪುಗಳನ್ನು ಸ್ವತಂತ್ರ್ಯವಾಗಿ ತಾನೇ ಮಾಡಬೇಕೆಂದರೆ ಅವನು ಎಂಥ ಧೈರ್ಯಶಾಲಿಯಾದರೂ ಮಾಡುವುದಕ್ಕೆ ಬರುವುದಿಲ್ಲ. ಅವರು ಇವರು ಕಾಂಬಿನೇಷನ್ ಆದಾಗ ಲೂಟಿ ಚೆನ್ನಾಗಿ ನಡೆಯುತ್ತೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದರಲ್ಲೇನೂ ಎರಡು ಮಾತು ಇಲ್ಲ, ನಿಜ. ಆದರೆ ಏಕೆ ಆ ಪರಿಸ್ಥಿತಿ ಉದ್ಭವವಾಗಿದೆ ಎಂದರೆ I am sorry to say, when the political leadership becomes weak, the bureaucrats will become strong.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಪೂರ್ತಿ ಅದೂ ಅಲ್ಲ. ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ is a milching cow ಅದರಲ್ಲಿ ತೆಗೆದಿದ್ದು ಗೊತ್ತಾಗುವುದಿಲ್ಲ. ಅದಕ್ಕೆ ಇಬ್ಬರೂ ಸೇರಿಕೊಂಡು ಕೆಲವರು; ನಾನು ಎಲ್ಲರೂ ಎಂದು ಹೇಳುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಎಲ್ಲರೂ ಅಲ್ಲ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, A weak political leadership does not cause so much harm. If a politicians is corrupt to the core, and if all his intentions are corrupt, then what happens? ವೀಕ್ ಮ್ಯಾನ್ ಎಂದರೆ ನಾವು ಎಕ್ಸ್‌ಪೆಕ್ಟ್ ಮಾಡಿದ ರೇಟ್‌ನಲ್ಲಿ ಡೈನಮಿಸಂ ಇಲ್ಲದೇ ಹೋಗ ಬಹುದು. The problem here is corruption; corruption of mind. I am not talking of the monetary corruption, but of corruption of mind. ಈ ಸಂಸ್ಥೆಯನ್ನು ಮುಳುಗಿಸಲೇಬೇಕೆನ್ನುವ ದುರುದ್ದೇಶ ಇರುವ ರಾಜಕೀಯ ನಾಯಕ ಕೂಡ ಇದ್ದರೆ ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ರಮೇಶ್‌ಕುಮಾರ್‌ರವರು ಕಾಮರಾಜ್ ಬಗ್ಗೆ ಹೇಳಿದರು. ಒಬ್ಬರು ಐಎಎಸ್ ಆಫೀಸರ್ಸ್ ರಿಟೈರ್ ಆಗಿದ್ದಾನೆ. ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕು, ಒನ್ ಇಯರ್ ಎಕ್ಸ್‌ಟೆನ್ಷನ್‌ಗೆಂದು ಕಾಮರಾಜ್ ಬಳಿ ಫೈಲನ್ನು ತೆಗೆದುಕೊಂಡು ಹೋಗಿದ್ದಾರೆ. ಕಾಮರಾಜ್ ಅವರು ಅದಕ್ಕೆ ಏನು ಬರೆದಿದ್ದಾರೆಂದರೆ ಇವನು ತೀರಿಹೋಬಿಟ್ಟರೆ ಏನು ಮಾಡುವುದು ಎಂದು ಹೇಳಿದ್ದಾರೆ. ಹಾಗೆ ಹೇಳುವಂಥ ಧೈರ್ಯ. ಈ ಸಭೆಯಲ್ಲಿ ಯಾರಿಗಾದರೂ ಇದೇಯಾ? ಈ ಮಂತ್ರಿಗಳಿಗೆ ಇರುತ್ತಾ ಆ ರೀತಿ ಹೇಳುವುದಕ್ಕೆ ಅಧಿಕಾರಿಗಳು ಬಂದ ತಕ್ಷಣ ಹೌದು, ಸ್ವಲ್ಪ ಸಹಾಯ ಮಾಡ್ರಿ ಎನ್ನುತ್ತೀರಿ.

ಇಂಥ ಧೈರ್ಯವನ್ನು ಇಟ್ಟುಕೊಂಡು ನಾವು ಕರಪ್ಷನ್ ಅನ್ನು ಹೇಗೆ ಅವಾಯ್ಡ್ ಮಾಡುವುದು?

ಶ್ರೀ ಎನ್. ಎಲ್ ನರೇಂದ್ರ ಬಾಬು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮಗೆಡ್ಡಿಯವರು, ರಮೇಶ್‌ಕುಮಾರ್ ಹೇಳಿದ ಹಾಗೆ When leaders become dealers and dealers become leaders all such accident happens.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, The contents of weak leadership is a combination of all. This, he is havings weakness towards that. A weak leadership does not mean that he is incapable. A weak politician, a weak political leadership means, he is a person who is having all sorts of weaknesses. That is called weak political leadership. That is why I told that weak political leadership means that it is a combination of all. So, when weak political leadership is tere, then bureaucrats will become strong, corrupt and development will stop. ನಾವು ಇವತ್ತು ನೋಡುತ್ತಿದ್ದೇವೆ. Most of the Ministers could not answer the IAS Officer and convince their Secretaries, than the Secretaries convincing the Ministers. Is it a democracy? In the democracy, the officer is convincing the Ministers and the officeres are directing the policies. Where are we? Why that has happened is because of weak political leadership. And , they are guiding. ನಾನು ಅದಕ್ಕೆ ಮಾನ್ಯ ಸಿದ್ಧರಾಮಯ್ಯನವರನ್ನು ಅಪ್ರೀಷಿಯೇಟ್ ಮಾಡುವುದು. He is not guided by the bureaucrats; there we will respect you. That is most important. Otherwise, the whole democracy will collapse and the whole democracy will get dehanerated. ಆದ್ದರಿಂದ ನಾನು ಇವತ್ತು ನಿಮಗೆ ಹೇಳುತ್ತೇನೆ. You tell me. ಯಾರಾದರೂ ಒಬ್ಬರು ಐಎಎಸ್ ಆಫೀಸರ್ಸ್, ಆಫೀಸರ್ಸ್ ನೋಟ್ ಅನ್ನು ಮಿನಿಸ್ಟರ್ಸ್‌ಗೆ ಕಳುಹಿಸಲು ಬರೆಯುತ್ತಾರೆ. ಅದನ್ನು ಸುಮಾರು ಜನ ನೋಡುವುದೇ ಇಲ್ಲ. ನೋಡಿದರೂ ಅವರಿಗೆ ಅರ್ಥ ಆಗುವುದಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂಬುದು ಅರ್ಥ ಆಗುವುದಿಲ್ಲ ಯೆಸ್, ಅವರು ಬರೆದು ಕೊಟ್ಟಿರುವುದನ್ನು ಹೇಳಿ ಬಿಡುವುದು. ಮೊನ್ನೆ ಇಲ್ಲಿ ಯಾರೋ ಹೌಸ್‌ನಲ್ಲಿ ಉತ್ತರ ಕೊಡುವಾಗ ಹೇಳುತ್ತಿದ್ದರಲ್ಲಾ, ಅದೇ ರೀತಿ. That is how I am telling. ಹಾಗಾಗಿ ಪಬ್ಲಿಕ್ ಸೆಕ್ಟಾರ್ಸ್‌ನ್ನು ಮುಳುಗಿಸಿದ್ದೇ ಇವರು. ಆ ಪಬ್ಲಿಕ್ ಸೆಕ್ಟಾರ್ಸ್‌ನ್ನು ರಿಜುವನೇಟ್ ಮಾಡಲಿಕ್ಕೆ, ಅದು ಲಾಭದಾಯಕವಾಗಿರತಕ್ಕಂಥದ್ದಕ್ಕೆ ಸರ್ಕಾರ ಏನಾದರೂ ಕ್ರಮ ಇಮ್ಮೀಡಿಯೆಟ್ ಆಗಿ ತೆಗೆದುಕೊಳ್ಳಲೇ ಬೇಕು. Great persons like Vishweshwaraiah, who is a man, who brought Karnataka into the industrial map of the country, he is the first man, first

statement, ಇಲ್ಲದಿದ್ದರೆ ಇವತ್ತು ಕರ್ನಾಟಕಕ್ಕೆ ಐಡೆಂಟಿಟಿ ಇರುತ್ತಿರಲಿಲ್ಲ. ಇವತ್ತು ಇಷ್ಟು ಇಂಜಿನಿಯರಿಂಗ್ ನೀವು ಮಾಡಿದ್ದೀರಲ್ಲಾ, Who is the model for that? Visheshwaraiah is the model. ಇವತ್ತು ಸ್ಟೀಲ್, ಶುಗರ್ ಫ್ಯಾಕ್ಟರಿ, ಎಲ್ಲವನ್ನೂ ಯಾರು ಮಾಡಿದ್ದು? It is all brainchild of Vishweshwaraiah. ಪೇಪರ್,ಸೋಪು, ಸಿಮೆಂಟ್, ಪೇಂಟ್ಸ್, it is all brainchild of Vishweshwaraiah.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಬೇಗ ಮುಗಿಸಿ, ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ಹಾಗಾಗಿ ಅವರ ಪರಂಪರೆ ಈ ರಾಜ್ಯಕ್ಕೆ ಇದೆ. ಈ ರಾಜ್ಯವನ್ನು ಅಭಿವೃದ್ಧಿ ಮಾಡಲಿಕ್ಕೆ ವಿಶ್ವೇಶ್ವರಯ್ಯನವರು ಎಷ್ಟು ಶ್ರಮ ವಹಿಸಿದ್ದಾರೆ. ಅದನ್ನು ನಾವು ಇವತ್ತು ನಾಶ ಮಾಡುತ್ತಿದ್ದೇವೆ. ನಾವು ಮಾಡಿದ್ದು ಏನೂ ಇಲ್ಲ. ಅಭಿವೃದ್ಧಿ ಮಾಡಿದ್ದು ಏನೂ ಇಲ್ಲ. ಅವರು ಮಾಡಿದ್ದನ್ನು ನಾವು ಇವತ್ತು ನಾಶ ಮಾಡುತ್ತಿದ್ದೇವಷ್ಟೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಒಂದು ನಿಮಿಷ ಇರಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಈ ಕಡೆನೂ ಸ್ವಲ್ಪ ಮಾತನಾಡಲು ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಒಂದೇ ಕಡೆ ಅವಕಾಶ ಕೊಟ್ಟರೆ ಹೇಗೆ?

(ಗೊಂದಲ)

ಶ್ರೀ ಆರ್. ಅಶೋಕ್ : ಲಾಟರಿ ಎತ್ತಿ ಪ್ರಶ್ನೆಗಳನ್ನು ಆಯ್ಕೆ ಮಾಡಿ ಪ್ರತಿದಿನಾ ನಮಗೆ ದಬ್ಬುತ್ತೀರಿ.

ಉಪಾಧ್ಯಕ್ಷರು : ನೋಡೋಣ ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ : ಸಾರ್ ನೀವು ಅವಕಾಶ ಕೊಟ್ಟರೆ ನಾಲ್ಕೈದು ಜನ ಮಾತನಾಡುತ್ತಾರೆ. ಪ್ರಶ್ನೋತ್ತರ ಬಂದರೆ 20 ಜನ ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಟ್ರೆಜರಿ ಬೆಂಚ್ ಕಡೆಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಿ.